ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

20

ಇಲಾಖೆ / ವಿಷಯ : DEPARTMENT / SUBJECT: ಮುಖ್ಯ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 16/3/2021

# ಸಿದ್ದು-ಸಿಎಂ ನಡುವೆ ಅಧಿಕಾರ ಜಟಾಪಟಿ

16/3/21

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ಬರುತ್ತೇವೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿ ಹೇಳಿದ ಮಾತು ಸಿಎಂ ಬಿಎಸ್‌ವೈ ಮತ್ತು ಸಿದ್ದರಾಮಯ್ಯ ನಡುವೆ ಮಾತಿನ ಜಟಾಪಟಿಗೆ ಕಾರಣವಾಯಿತು.

ವಿಧಾನಸಭೆಯಲ್ಲಿ ನಡೆದ ಬಜೆಟ್ ಮೇಲಿನ ಚರ್ಚೆ ವೇಳೆ ಸಿಎಂ ಯಡಿಯೂರಪ್ಪ ಅವರ ಜತೆ ವಾಗ್ವಾದಕ್ಕಿಳಿದ ಸಿದ್ದರಾಮಯ್ಯ, 'ಕಾಂಗ್ರೆಸ್ ಅನ್ನು ಮರಳಿ ಆಡಳಿತ ಪಕ್ಷದ ಸ್ಥಾನಕ್ಕೆ ತಂದೇ ತರುತ್ತೇನೆ. ನಾನು ಮರಳಿ ಚುನಾವಣೆಗೆ ಸ್ಪರ್ಧಿಸಿ ಸಿಎಂ ಆಗೇ ತೀರುತ್ತೇನೆ' ಎಂದು ಸವಾಲು ಹಾಕಿದ್ದಾರೆ.

ಬಜೆಟ್ ಚರ್ಚೆ ಸಂದರ್ಭದಲ್ಲಿ ಸಿದ್ದರಾಮಯ್ಯ ಮಾತನಾಡುವ ವೇಳೆ ಮಧ್ಯೆ ಪ್ರವೇಶಿಸಿದ ಸಿಎಂ, 'ಕೋವಿಡ್ ಸಂದರ್ಭ ನೀವು ನನ್ನ ಜಾಗದಲ್ಲಿದ್ದರೆ ಏನು ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿದರು. ಇದಕ್ಕೆ ಅಷ್ಟೇ ತೀಕ್ಷ್ಣವಾಗಿ ಉತ್ತರ ನೀಡಿದ ಸಿದ್ದರಾಮಯ್ಯ, 'ನಿಮ್ಮ ಜಾಗ ಬಿಟ್ಟುಕೊಡಿ ನಾನು ಏನು ಮಾಡುತ್ತಿದ್ದೆ ಎಂಬುದನ್ನು ತೋರಿಸುತ್ತೇನೆ' ಎಂದರು.



'ಸಿಎಂ ಜಾಗ ಬಿಟ್ಟು ಕೊಡುವುದು ನನ್ನ ಕೈಯಲ್ಲಿಲ್ಲ, ಜನರ ಕೈಯಲ್ಲಿದೆ' ಎಂದು ಬಿಎಸ್‌ವೈ ತಿರುಗೇಟು ನೀಡಿದರು. 'ನೀವು ಈ ರೀತಿ ಆಡಳಿತ ಮಾಡುತ್ತಿದ್ದರೆ ಜನ ಮುಖ್ಯಮಂತ್ರಿ ಸ್ಥಾನವನ್ನು ನನಗೆ ಕೊಡುತ್ತಾರೆ. ನಾವು ಮತ್ತೇ ಅಧಿಕಾರಕ್ಕೆ ಬಂದೆ ಬರುತ್ತೇವೆ.' ಎಂದು ಸಿದ್ದರಾಮಯ್ಯ ಹೇಳಿದರು.

ಆಗ ಯಡಿಯೂರಪ್ಪ ಮಾತನಾಡಿ, 'ಜನರಿಗೆ ಎಲ್ಲವೂ ಗೊತ್ತಿದೆ. ಜನರೇ ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಮುಂದೆಯೂ ಇಲ್ಲೇ ಇರುತ್ತೇವೆ' ಎಂದರು.

ಮಧ್ಯೆ ಪ್ರವೇಶಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, 'ನಾವು ಮಂಡಿಸಿದ ಬಜೆಟ್ ಮೇಲೆ ನೀವು ಮಾತನಾಡುತ್ತಿದ್ದೀರಿ, ಆದಾಯ ಕೊರತೆ ಇದೆ. ಕೋವಿಡ್ ಈ ಜಗತ್ತಿಗೆ ಸಮಸ್ಯೆ ತಂದಿದೆ. ಹಾಗಾಗಿ ರಾಜ್ಯದ ಆದಾಯ ಕೊರತೆಯಾಗಿದೆ. ಈ ಹಿಂದೆ ಯಡಿಯೂರಪ್ಪ 4,300 ಕೋಟಿ ರು. ಹೆಚ್ಚುವರಿ ಆದಾಯ ಬಜೆಟ್ ಮಂಡಿಸಿದ್ದರು. ನೀವು ಸಿಎಂ ಆದ ಮೇಲೆ ಅದು 2 ಸಾವಿರ ಕೋಟಿಗೆ ಇಳಿಯಿತು. ಜನ ನಿಮ್ಮನ್ನು ಅಧಿಕಾರದಿಂದ ಕೆಳಗಿಳಿಸಿದರು' ಎಂದು ತಿರುಗೇಟು ನೀಡಿದರು. 'ನೀವು ಸಿಎಂ ಆಗಿದ್ದಾಗ ಆರ್ಥಿಕ ಹಿಂಜರಿತ ಇರಲಿಲ್ಲ, ಕೋವಿಡ್ ಸಮಸ್ಯೆ ಇರಲಿಲ್ಲ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಆಗ ಸಿದ್ದರಾಮಯ್ಯ 'ನಾನು ಮಾತನಾಡಿದ ಮೇಲೆ ನೀವು ಮಾತನಾಡಿ' ಎಂದು ಹೇಳಿ, ಈ ಚರ್ಚೆಗೆ ತೆರೆ ಎಳೆದು ತಮ್ಮ ಬಜೆಟ್ ಮೇಲಿನ ಚರ್ಚೆಯನ್ನು ಮುಂದುವರಿಸಿದರು.

